# ಸ್ವಾಮಿ ವಿರಜಾನಂದ

*"ಸ್ವಾಮೀಜೀರ್ ಪದಪ್ರಾಂತೇ" ಎಂಬ ಬಂಗಾಳಿ ಪುಸ್ತಕದಿಂದ ಸ್ವಾಮಿ ವಿರಜಾನಂದಜಿಯವರ ಜೀವನಚರಿತ್ರೆಯ ಸಂಗ್ರಹಾನುವಾದ ಮಾಡಿಕೊಟ್ಟಿರುವ ಕುಮಾರಿ ವಿ. ಮೀನಾ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.*

ತರುಣನೊಬ್ಬನು "ನನಗೇನು ತಿಳಿದಿದೆ, ನಾನು ಇತರರಿಗೆ ಬೋಧಿಸಲು?" ಎಂದು ನುಡಿದಾಗ ಸ್ವಾಮಿ ವಿವೇಕಾನಂದರು ಗಂಭೀರಕಂಠದಿಂದ ಉತ್ತರಿಸಿದರು: "ಓಹೊ! ಎದ್ದು ನಿಂತು ಅದನ್ನೇ ಹೇಳು—'ನನಗೇನೂ ತಿಳಿದಿಲ್ಲ' ಎಂದು. ಇದೂ ಒಂದು ಮಹಾ ಶಿಕ್ಷಣದಾನವೇ. ನನಗೆ ಎಲ್ಲ ತಿಳಿದಿದೆ ಎಂಬುದು ಅಜ್ಞಾನ."

ಆಗಲೂ ತರುಣಶಿಷ್ಯರಾದ ವಿರಜಾನಂದರಿಗೆ ತಮ್ಮ ಆಚಾರ್ಯನ ಮಾತಿನಂತೆ ನಡೆದುಕೊಳ್ಳುವ ಮನಸ್ಥೈರ್ಯ ಉಂಟಾಗಲಿಲ್ಲ. ಆಗ ಸ್ವಾಮಿಗಳು ಹೇಳುತ್ತಾರೆ, "ನೋಡು, ಕೇವಲ ನಿನ್ನ ಮುಕ್ತಿಯನ್ನೇ ಹುಡುಕುವಿಯಾದರೆ ಅದು ವ್ಯರ್ಥ. ಇತರರ ಮುಕ್ತಿಗಾಗಿಯೂ ಒಂದು ವೇಳೆ ನೀನು ಕೆಲಸ ಮಾಡುವೆಯಾದರೆ ಆಗಲೇ ನಿನಗೆ ಮುಕ್ತಿ" ಎಂದು. ಆಗ ತರುಣನ ಮನಸ್ಸಿನ ಸಂಶಯವೆಲ್ಲಾ ಹೋಯಿತು ಹಾಗೂ **ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ** ಎಂಬ ಆದರ್ಶಕ್ಕಾಗಿ ತಮ್ಮ ಜೀವನವನ್ನು ಸಮರ್ಪಿಸಲು ಸಂಕಲ್ಪಿಸಿದರು.

ಪೂರ್ವಾಶ್ರಮದಲ್ಲಿ ವಿರಜಾನಂದರ ಹೆಸರು ಕಾಲೀಕೃಷ್ಣ ಎಂಬುದಾಗಿ. ಅವರ ತಂದೆ ತ್ರೈಲೋಕನಾಥ ಬಸುಗಳು ಓರ್ವ ಖ್ಯಾತ ವೈದ್ಯರಾಗಿದ್ದರು. ಕಾಲೀಕೃಷ್ಣರ ತಾಯಿಯ ಹೆಸರು ನಿಷಾದಕಾಲೀ. ಆಕೆ ಓರ್ವ ಭಕ್ತಿಯುತ ಚೇತನರಾಗಿದ್ದರು. ಅವರು ಅತ್ಯಂತ ಅನಾಸಕ್ತಿಯಿಂದ ಎಲ್ಲ ಕೆಲಸಗಳನ್ನೂ ನಿರ್ವಹಿಸುತ್ತಿದ್ದರು. ಕಾಲೀಕೃಷ್ಣರ ತ್ಯಾಗಜೀವನಕ್ಕೆ ತಾಯಿಯೇ ಮೊದಲ ಸ್ಫೂರ್ತಿದಾಯಿನಿಯಾಗಿದ್ದರು.

೧೮೯೦ರಲ್ಲಿ ಕಾಲೀಕೃಷ್ಣರು ಪ್ರವೇಶಿಕಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಲೇ ಅವರಲ್ಲಿ ಧರ್ಮಪಿಪಾಸೆ ಜಾಗ್ರತವಾಗತೊಡಗಿತು. ಅವರಿಗೆ ಬಹು ವಿಶಿಷ್ಟ ಸ್ನೇಹಿತರ ಸಂಪರ್ಕ ಉಂಟಾಯಿತು—ಮಹೇಂದ್ರ, ಸುಧೀರ, ಹರಿಪದ, ಸುಶೀಲ, ಗೋವಿಂದ, ಶುಕುಲ್ ಮುಂತಾದವರು. ಇವರೆಲ್ಲಾ ಮುಂದೆ ಶ್ರೀರಾಮಕೃಷ್ಣ ಮಠವನ್ನು ಸೇರಿ ಅತ್ಯಂತ ಗೌರವಾನ್ವಿತ ಸಾಧುಗಳಾಗಿ ಬೆಳಗಿದರು. ಎಲ್ಲರೂ ಒಟ್ಟಾಗಿ ಸೇರಿ ಖಗೇಂದ್ರರ ಮನೆಯಲ್ಲಿ ಸಾಧನೆ, ಭಜನೆ, ಸದ್‌ಗ್ರಂಥ ಪಠನೆ ಸಮಾಲೋಚನೆ ಮುಂತಾದ ಚಟುವಟಿಕೆಗಳಲ್ಲಿ ನಿರತರಾಗುತ್ತಿದ್ದರು. ಧ್ಯಾನ ಧಾರಣಾದಿಗಳಿಂದ ತಮ್ಮ ನೈತಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದಲ್ಲದೆ ನಾನಾಭಾವದ ಸಾಧುಸಂತರನ್ನು ಹೋಗಿ ದರ್ಶನ ಮಾಡಿ ಬರುತ್ತಿದ್ದರು. ಕಾಲೀಕೃಷ್ಣರ ಮನೆಯ ಪುಸ್ತಕಭಂಡಾರದಲ್ಲಿದ್ದ **"ಶ್ರೀರಾಮಕೃಷ್ಣರ ಜೀವನವೃತ್ತಾಂತ"** ಎಂಬ ಪುಸ್ತಕವನ್ನು ಅವರೆಲ್ಲಾ ಓದಿ ಶ್ರೀರಾಮಕೃಷ್ಣರೆಡೆಗೆ ಆಕೃಷ್ಟರಾದರು. ಕಾಲೀಕೃಷ್ಣರು ನಿರ್ಜನ ಪ್ರದೇಶದಲ್ಲಿ ಧ್ಯಾನಜಪಗಳನ್ನು ಮಾಡುತ್ತಿದ್ದರು. ತಮ್ಮ ಕೋಣೆಯ ಬಾಗಿಲುಹಾಕಿ ಬಹುಕಾಲ ಆರಾಧನೆ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಕಾಲೀಕೃಷ್ಣ ಖಗೇಂದ್ರರಿಬ್ಬರ ಮನಸ್ಸಿನಲ್ಲೂ ತೀವ್ರ ವೈರಾಗ್ಯ ಉಂಟಾಗಲು ಮನೆಯನ್ನು ತೊರೆದು ಪರ್ವತ ಗುಹೆಗಳಲ್ಲಿ ತಪಸ್ಸನ್ನಾಚರಿಸುವ ನಿರ್ಧಾರ ಮಾಡಿದರು. ಆದರೆ ಅವರ ನೆರೆಯವರಾದ ನಂದಲಾಲ ಬಾಬುಗಳು, ಅವರು ಹಾಗೆ ಮಾಡಬಾರದೆಂದೂ ಅದು ಅವರಿಗೆ ಮಂಗಲಕರವಲ್ಲವೆಂದೂ ಹೇಳಿದರು. ನಂದಬಾಬುಗಳು ವಿಜಯಕೃಷ್ಣಗೋಸ್ವಾಮಿಗಳ ಶಿಷ್ಯರೂ ಸಾಧಕರೂ ಆಗಿದ್ದರಿಂದ ಅವರ ಮಾತಿಗೆ ಮನ್ನಣೆಯಿತ್ತು ಸ್ನೇಹಿತರಿರ್ವರೂ ಸಮಯ ಬಂದಿಲ್ಲವೆಂದು ಸುಮ್ಮನಾದರು. ಕ್ರಮೇಣ ಕಾಂಕುರಗಾಚಿಗೆ ಹೋಗಿಬರಲು ಪ್ರಾರಂಭ ಮಾಡಿದರು. ಅಲ್ಲಿ ಶ್ರೀರಾಮಕೃಷ್ಣ ದೇವಸ್ಥಾನದ ಎಲ್ಲ ಸೇವೆಯನ್ನೂ ಮಾಡುವುದು, ರಾಮಚಂದ್ರದತ್ತರಿಂದ ಶ್ರೀರಾಮಕೃಷ್ಣರ ವಿಷಯವಾಗಿ ಕೇಳುವುದು ಮಾಡುತ್ತಿದ್ದರು.

'ಮ'ರವರು ರಿಪ್ಪನ್ ಕಾಲೇಜಿನಲ್ಲಿ ಆಂಗ್ಲ ಅಧ್ಯಾಪಕರಾಗಿದ್ದರು. ಅವರು ಸಮಯ ದೊರೆತಾಗ ಕಥಾಮೃತ ಓದುವುದು, ತಿದ್ದುವುದು ಮಾಡುತ್ತಿದ್ದರು. ಇದನ್ನೆಲ್ಲಾ ಗಮನಿಸಿದ ಕಾಲೀಕೃಷ್ಣರೂ ಅವರ ಇತರ ಸ್ನೇಹಿತರೂ 'ಮ'ರಿಂದ ಆಕರ್ಷಿಸಲ್ಪಟ್ಟು, ಅವರೆಡೆಗೆ ಹೋಗಿಬರಲಾರಂಭಿಸಿದರು. 'ಮ'ರ ಪ್ರೇರೇಪಣೆಯಂತೆ ಶ್ರೀರಾಮಕೃಷ್ಣರ ತ್ಯಾಗೀ ಸಂನ್ಯಾಸಿಗಳನ್ನು ನೋಡಲು ವರಾಹನಗರ ಮಠಕ್ಕೂ ಹೋಗಿಬರಲಾರಂಭಿಸಿದರು. ಮಠಕ್ಕೆ ಅವರ ಪ್ರಥಮ ಆಗಮನದ ಬಗ್ಗೆ ವಿರಜಾನಂದರ ಮಾತಿನಲ್ಲೇ ಕೇಳೋಣ : "ಅದೊಂದು ಬಿಸಿಲಿನ ದಿನ. ಸುಮಾರು ೭ ಗಂಟೆಯಿಂದ ಬಿಸಿಲು, ಹಾದಿ ಸರಿಯಾಗಿ ತಿಳಿಯದದಿದ್ದ ಕಾರಣ ನಡೆದು ನಡೆದು ಸುಮಾರು ಒಂದು ಗಂಟೆಯ ಸಮಯಕ್ಕೆ ಮಠಕ್ಕೆ ಹೋದೆವು. ನನ್ನ ಜೊತೆಗೆ ಖಗೇಂದ್ರ, ಹರಿಪದ, ಕುಂಜ ಇದ್ದರು. ಆಗ ಸಾಧುಗಳೆಲ್ಲ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ರಾಮಕೃಷ್ಣಾನಂದರು, ಶಿವಾನಂದರು, ನಿರಂಜನಾನಂದರು ಮತ್ತಿತರ ಪ್ರತ್ಯಕ್ಷಶಿಷ್ಯರ

ದರ್ಶನ ಪಡೆದೆವು. ನಾವು ಪ್ರಣಾಮ ಮಾಡುತ್ತಿದ್ದಂತೆ ಕುಶಲ ಪ್ರಶ್ನೆ ಮಾಡಿದರು. ಅವರನ್ನೆಲ್ಲಾ ನೋಡಿ ನಮಗೆ ಹೊಸ ಜಗತ್ತಿನ ಅರಿವಾಯಿತು. ಮನಸ್ಸಿಗೆ ಇದೊಂದು ಅಲೌಕಿಕ ಸ್ಥಾನವಾಗಿ ಕಂಡುಬಂತು. ಬಿದ್ದುಹೋದ ಮನೆ, ಮುರಿದ ಬಾಗಿಲುಗಳು. ಆದರೂ ಅಲ್ಲೊಂದು ಅಪೂರ್ವವಾದ, ಗಂಭೀರ ವಾದ ಆಧ್ಯಾತ್ಮಿಕ ವಾತಾವರಣ ಹೊಳೆಯುತ್ತಿತ್ತು. ಅವರೆಲ್ಲರ ವದನ ಉರಿಯುವ ಬೆಂಕಿಯಂತೆ ಕಂಗೊಳಿಸುತ್ತಿತ್ತು. ಅನೇಕ ದೇವದೇವಿಯರ ಚಿತ್ರಗಳಿದ್ದವು. ಪ್ರತಿಚಿತ್ರದ ಕೆಳಗೂ ಕೆಲವು ಸೂಕ್ತಿಗಳನ್ನು ಬರೆದಿದ್ದರು. ಉದಾ : 'ತ್ಯಾಗವನ್ನು ಇಚ್ಛಿಸು ವೆಯಾದರೆ ವಿಷಯಗಳನ್ನು ವಿಷದಂತೆ ತ್ಯಜಿಸು' ಎಂಬುದಾಗಿ. ಕೆಲವು ಸಮಯಕ್ಕೆ ಮುಂಚೆ ವಿವೇಕಾನಂದರು ಪರಿವ್ರಾಜಕರಾಗಿ ಮಠವನ್ನು ತೊರೆದು ಹೋಗಿದ್ದರು. ಸುಮಾರು ೪ ಗಂಟೆಯ ಸಮಯಕ್ಕೆ ದೇವರ ಮನೆಯ ಬಾಗಿಲು ತೆರೆದಾಗ ಪ್ರಣಾಮ ಮಾಡಿ ಮನೆಗೆ ಹಿಂತಿರುಗಿದೆವು."

ಮಠಕ್ಕೆ ನೀಡಿದ ಈ ಮೊದಲ ಭೇಟಿ ಕಾಲೀಕೃಷ್ಣರಿಗೆ ಆಜೀವನವೂ ಸ್ಫೂರ್ತಿದಾಯಕವಾಗಿತ್ತು. ಅಂದಿನಿಂದ ಅವರು ಮಠಕ್ಕೆ ಬರುವುದು ಹೆಚ್ಚು ಮಾಡಿದರು. ಒಮ್ಮೆ ರಾಮಕೃಷ್ಣಾ ನಂದರು ಅವರ ಓದಿನ ಬಗ್ಗೆ ವಿಚಾರಿಸಲು, ತಾವು ಅಂಕ ಗಣಿತದಲ್ಲಿ ಹಿಂದೆ ಇರುವುದಾಗಿ ಕಾಲೀಕೃಷ್ಣರು ಉತ್ತರಿಸಿ ದರು. ಆಗ ರಾಮಕೃಷ್ಣಾನಂದರು "ಈ ಬೇಸಿಗೆಯ ರಜೆಯಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಬಾ. ನಾನು ನಿನಗೆ ಗಣಿತವನ್ನು ಹೇಳಿಕೊಡುತ್ತೇನೆ" ಎಂದರು. ಅವರ ತಂದೆಯ ಅಪ್ಪಣೆ ಪಡೆದು ಕಾಲೀಕೃಷ್ಣರು ಆ ಬೇಸಿಗೆಯ ರಜೆಯಲ್ಲಿ ಪುಸ್ತಕ ತೆಗೆದುಕೊಂಡು ವರಾಹನಗರ ಮಠಕ್ಕೆ ಬಂದೇಬಿಟ್ಟರು. ಎಲ್ಲರೂ ತುಂಬ ಆನಂದಪಟ್ಟರು. ಕಾಲೀಕೃಷ್ಣರೂ ಸಹ ಸ್ವಧಾಮಕ್ಕೆ ಬಂದಂತೆ ಮಠದ ಸಣ್ಣಪುಟ್ಟ ಕೆಲಸ ಮಾಡುತ್ತಾ ರಾಮಕೃಷ್ಣಾನಂದರೊಡನೆ ಅತ್ಯಂತ ಆತ್ಮೀಯತೆಯಿಂದ ದಿನಗಳನ್ನು ಕಳೆದರು. ಸುಮಾರು ಎರಡೂವರೆ ತಿಂಗಳು ಯಾವುದೋ ನಶೆಯಲ್ಲಿದ್ದಂತೆ ಕಳೆದುಹೋಯಿತು! ತಂದ ಪುಸ್ತಕಗಳು ಇಟ್ಟಲ್ಲಿಯೇ ಇದ್ದವು! ಆದರೆ ಅವರು ಪಡೆ ದಿದ್ದುದು ಹೊಸ ರೀತಿಯ ಶಿಕ್ಷಣ! ರಜೆ ಮುಗಿದು ಕಾಲೀ ಕೃಷ್ಣರು ಮನೆಗೆ ಬಂದರು ನಿಜ. ಆದರೆ ಅವರ ಹೃದಯ ಮಠ ದಲ್ಲಿಯೇ ನೆಲೆಸಿತ್ತು.

ಪುನಃ ಕಾಲೇಜಿಗೆ ಹೋಗಲಾರಂಭಿಸಿದರು. ಎಲ್ಲವೂ ಯಾಂತ್ರಿಕ. ಕೇವಲ ಏಕಾಂತದಲ್ಲಿ ಕುಳಿತು ಜಪ, ಧ್ಯಾನಾದಿ ಗಳಲ್ಲೇ ಸಮಯ ವಿನಿಯೋಗಿಸುತ್ತಿದ್ದರು. ಮಗನಲ್ಲಿ ಉಂಟಾದ ಮಾರ್ಪಾಟನ್ನು ಕಂಡ ಅವರ ತಂದೆ ಮಗನನ್ನು ಕರೆದು "ಸಂಸಾರ ಅಥವಾ ಸಂನ್ಯಾಸ—ಎರಡರಲ್ಲಿ ಒಂದನ್ನು ಆರಿಸಿಕೊ" ಎಂದರು. ಕಾಲೀಕೃಷ್ಣರು ಸರ್ವಸಂಗಪರಿತ್ಯಾಗ ಮಾಡಿ ಭಗವಂತನ ದರ್ಶನವನ್ನೇ ಆದರ್ಶವಾಗಿ ಆರಿಸಿ ಕೊಂಡರು. ಮಾತಾಪಿತೃಗಳ ಪ್ರೇಮಾಶೀರ್ವಾದವನ್ನು ಪಡೆದು ೧೮೯೧ರಲ್ಲಿ ಕಾಲೀಕೃಷ್ಣರು ಮನೆಯನ್ನು ತೊರೆದು ವರಾಹ ನಗರ ಮಠಕ್ಕೆ ಬಂದು ಸೇರಿದರು. ಅವರ ಭಕ್ತಿಮತಿಯಾದ ತಾಯಿ ತಮ್ಮ ಪುತ್ರನಿಗಾಗಿ ಒಂದು ಹೊಸ ವಸ್ತ್ರವನ್ನು ತಂದು ಅದಕ್ಕೆ ಕಾಷಾಯ ಬಣ್ಣ ಹಾಕಿಕೊಟ್ಟರು. ಮಠದ ಸಾಧುಗಳಿಗಾಗಿ, ಶ್ರೀರಾಮಕೃಷ್ಣರಿಗಾಗಿ ಅನೇಕ ರೀತಿಯ ತಿಂಡಿತಿನಿಸುಗಳನ್ನು ತಯಾರಿಸಿಕೊಟ್ಟರು. ಪ್ರತ್ಯಕ್ಷಶಿಷ್ಯರ ತರುವಾಯ ಶ್ರೀರಾಮಕೃಷ್ಣರನ್ನು ಕುರಿತು ಕೇಳಿ, ಸ್ಫೂರ್ತಿಯನ್ನು ಪಡೆದು ಸರ್ವಸಂಗಪರಿತ್ಯಾಗ ಮಾಡಿ ಓರ್ವ ಬಾಲಕ ಮಠಕ್ಕೆ ಬಂದು ಸೇರಿದುದು ಇದೇ ಮೊದಲು. ಎಲ್ಲರೂ ಆನಂದದಿಂದ ಕಾಲೀಕೃಷ್ಣರನ್ನು ಪ್ರೀತಿಯಿಂದ ಕಾಣುತ್ತಿದ್ದರು. ರಾಮಕೃಷ್ಣಾ ನಂದರ ಪೂತ ಸಾನ್ನಿಧ್ಯದಲ್ಲಿ ತಮ್ಮ ಸಮಯವನ್ನು ಸಾಧನೆ, ಭಜನೆ, ಸೇವೆಗಳಲ್ಲಿ ಕಳೆಯುತ್ತ ಕಾಲೀಕೃಷ್ಣರೂ ಆನಂದ ದಿಂದಿದ್ದರು.

೧೮೯೨ರಲ್ಲಿ ಶ್ರೀಮಾತೆ ಶಾರದಾದೇವಿಯವರು ಜಯರಾಂ ಬಾಟಿಯಲ್ಲಿ ಆಚರಿಸುವ ಜಗದ್ಧಾತ್ರಿಯ ಪೂಜೆಯನ್ನು ನೋಡಲು ಸ್ವಾಮಿ ಶಾರದಾನಂದರೊಡನೆ ಕಾಲೀಕೃಷ್ಣರೂ ಹೊರಟರು. ಮೊದಲು ಶ್ರೀರಾಮಕೃಷ್ಣರ ಜನ್ಮಸ್ಥಾನವಾದ ಕಾಮಾರಪುಕುರ ವನ್ನು ದರ್ಶಿಸಿ ನಂತರ ಜಯರಾಂಬಾಟಿಗೆ ಹೋದರು. ಎಳೆಯ ನಾದ ಕಾಲೀಕೃಷ್ಣನನ್ನು ಕಂಡು ಮಾತೆಯವರು ಅತ್ಯಾನಂದಿತ ರಾದರು. ತುಂಬ ವಾತ್ಸಲ್ಯದಿಂದ ಆತನನ್ನು ಮಗುವಾಗಿ ಸ್ವೀಕರಿಸಿದರು. ಚಿಕ್ಕವಯಸ್ಸಿನವರಾದ ಕಾಲೀಕೃಷ್ಣರೂ ಸಂಕೋಚವಿಲ್ಲದೆ ಒಳಗೆ ಹೊರಗೆ ಓಡಾಡುತ್ತಾ ಮಾತೆಯವರ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾ, ಹಗಲೂರಾತ್ರಿ ಧ್ಯಾನ ಜಪಗಳೊಂದಿಗೆ ಸಮಯ ಕಳೆದರು. ಜಗದ್ಧಾತ್ರಿಯ ಪೂಜೆ ಯನ್ನು ಮುಗಿಸಿಕೊಂಡು ಹೊರಡುವ ಮುನ್ನ ಎಲ್ಲರೂ ಸ್ವಲ್ಪಕಾಲ ಜ್ವರದಿಂದ ನರಳಿದರು. ತುಸು ಚೇತರಿಸಿಕೊಳ್ಳು ತ್ತಿದ್ದಂತೆ ಕಲ್ಕತ್ತೆಗೆ ಮರಳಿದರು. ಜಯರಾಂಬಾಟಿಯಿಂದ ಹೊರಡುವ ದಿನ ಕಾಲೀಕೃಷ್ಣ ಮುಂತಾದವರೆಲ್ಲ ಗಾಡಿಯಲ್ಲಿ ಕುಳಿತಿದ್ದಾರೆ, ಶ್ರೀಮಾತೆಯವರು ಸ್ವಲ್ಪದೂರದಲ್ಲಿ ನಿಂತು ಕಣ್ಣೀರನ್ನು ಸುರಿಸುತ್ತಾ ಅವರನ್ನು ಬೀಳ್ಕೊಂಡರು. ಕಾಲೀ ಕೃಷ್ಣರೂ ಅಳಲು ಪ್ರಾರಂಭಮಾಡಿದರು. ಮುಂದಿನ ದಿನ ಗಳಲ್ಲಿ ಅದನ್ನು ಸ್ಮರಿಸಿ ವಿರಜಾನಂದರು ಈ ರೀತಿ ಹೇಳು ತ್ತಿದ್ದರು : "ಅದೆಂತಹ ಮಾತೃಪ್ರೇಮ! ಮನೆಯಲ್ಲಿ ನಾನು ನನ್ನ ಹೆತ್ತ ತಾಯಿಯ ಪ್ರೀತಿಯನ್ನು ಸವಿದಿದ್ದೆ. ಆದರೆ ಶ್ರೀಮಾತೆ ಯವರಾದರೊ ಅನಂತಕಾಲದ ಜನನಿಯಾಗಿ ಕಂಡರು. ಅವರು ತಮ್ಮ ದಿವ್ಯಪ್ರೇಮದಿಂದ ನನ್ನನ್ನು ಒಮ್ಮೆಗೇ ಅವರ ಕಡೆಗೆ ಆಕರ್ಷಿಸಿಬಿಟ್ಟರು." ಮಠಕ್ಕೆ ಹಿಂತಿರುಗಿದ ಕಾಲೀಕೃಷ್ಣರು ಮತ್ತೊಮ್ಮೆ ಜ್ವರದಿಂದ ಬಳಲಿದರು. ೧೮೯೨ರಲ್ಲಿ ಮಠ ಆಲಂಬಜಾರಿಗೆ ವರ್ಗಾವಣೆಗೊಂಡಿತು.

೧೮೯೩ರಲ್ಲಿ ಶ್ರೀಮಾತೆಯವರು ನೀಲಾಂಬರ ಬಾಬುವಿನ

ಉದ್ಯಾನದ ಮನೆಯಲ್ಲಿ ಇದ್ದರು. ಅವರನ್ನು ನೋಡಲು ಹೋದ ಕಾಲೀಕೃಷ್ಣರ ದೇಹಾರೋಗ್ಯ ಕಂಡು ಮಾತೆಯವರು ಚಿಂತಿತರಾಗಿ ಅವರನ್ನು ಬಳಿಗೆ ಕರೆದು "ಅಪ್ಪಾ, ಜ್ವರದ ತಾಪ ತೀವ್ರವಾಗಿ, ನಿನ್ನ ಶರೀರ ಅತ್ಯಂತ ದುರ್ಬಲವಾಗಿದೆ. ಕೆಲವು ಕಾಲ ನಿನ್ನ ಮನೆಯಲ್ಲಿದ್ದು ಆರೋಗ್ಯ ಸುಧಾರಿಸಿಕೊಂಡು ಮತ್ತೆ ಮಠಕ್ಕೆ ಬಾ" ಎಂದರು. ಇದನ್ನು ಕೇಳಿ ಕಾಲೀಕೃಷ್ಣರಿಗೆ ಅತೀವ ವೇದನೆಯುಂಟಾಯಿತು. ಮಠವನ್ನು ತೊರೆದು ಮನೆಗೆ ಹೋಗಲು ಅವರಿಗೆ ಇಚ್ಛೆಯಿಲ್ಲ. ಆದರೆ ಶ್ರೀಮಾತೆಯವರು "ನಾನು ಹೇಳಿದಂತೆ ಮಾಡು. ನಿನಗೆ ಒಳ್ಳೆಯದಾಗುತ್ತದೆ" ಎಂದು ಮತ್ತೆ ಮತ್ತೆ ಹೇಳಿದರು. ಅಲ್ಲಿಂದ ಹೊರಟುಬಂದ ಕಾಲೀಕೃಷ್ಣರು ಏಕಾಂತದಲ್ಲಿ ಕುಳಿತು ರೋದಿಸತೊಡಗಿದರು. ಶ್ರೀಮಾತೆಯವರಿಗೆ ತಮ್ಮ ಮಗು ಅಳುತ್ತಿದ್ದಾನೆಂದು ತಿಳಿಯಿತು. ಆಗ ಅವರು ಗೋಲಾಪ್‌ಮಾ ಬಳಿ "ನೋಡು, ಗೋಲಾಪ್, ಆತ ಎಷ್ಟು ಇಳಿದುಹೋಗಿದ್ದಾನೆ. ಆದ್ದರಿಂದ ಮನೆಯಲ್ಲಿ ಆರೈಕೆ ಮಾಡಿಕೊಂಡು ಬಾ. ಮಠದಲ್ಲಿ ಅದು ಸಾಧ್ಯವಾಗುವುದಿಲ್ಲ ಎಂದೆ. ಅದಕ್ಕೆ ಆತ ಅಳುತ್ತಿದ್ದಾನೆ. ಅವನ್ನು ನೋಡಿ ನನಗೂ ಅಳು ಬರುತ್ತದೆ" ಎಂದರು. ಅಷ್ಟರಲ್ಲಿ ಯೋಗಾನಂದರು ಕಾಲೀಕೃಷ್ಣರನ್ನು ಸಮಾಧಾನಪಡಿಸಿ ಶ್ರೀಮಾತೆಯವರ ಬಳಿ ಮಂತ್ರದೀಕ್ಷೆ ಪಡೆಯುವಂತೆ ಸಲಹೆ ಯಿತ್ತರು. ಶ್ರೀಮಾತೆಯವರೂ ಸಹ ಆನಂದದಿಂದ ಆತನಿಗೆ ಮಂತ್ರೋಪದೇಶ ಮಾಡಿದರು. ಮನೆಯಲ್ಲಿ ತೀವ್ರಸಾಧನೆ ಮಾಡುವ ಆಸೆ ಹೊತ್ತು ಕಾಲೀಕೃಷ್ಣರು ಮನೆಯಲ್ಲಿ ಸ್ವಲ್ಪ ಕಾಲ ಕಳೆಯಲು ಒಪ್ಪಿದರು.

ನೀಲಾಂಬರ ಬಾಬುಗಳ ಉದ್ಯಾನವನದಿಂದ ಹಿಂದಿರುಗಲು ಕಾಲೀಕೃಷ್ಣರು ದೋಣಿ ಹತ್ತಿದರು. ಆಗ ಮಳೆಗಾಲ. ಸಣ್ಣದಾಗಿ ಮಳೆ ಬೀಳುತ್ತಿದೆ. ಅಲ್ಲಿಂದ ಮಾತೆಯವರಿಗೆ ನಮಸ್ಕರಿಸಲು ಕಾಲೀಕೃಷ್ಣರು ಹಿಂತಿರುಗಿ ನೋಡಿದರು. ಶ್ರೀಮಾತೆಯವರು ಅಶ್ರುಧಾರೆ ಸುರಿಸುತ್ತಾ, ಮಳೆಯಲ್ಲಿ ನೆನೆಯುತ್ತಾ ಮಹಡಿಯ ಚಾವಣಿಯ ಮೇಲೆ ನಿಂತು ಕಾಲೀಕೃಷ್ಣರನ್ನೇ ನೋಡುತ್ತಿದ್ದರು. ಇದನ್ನು ಕಂಡು ಕಾಲೀಕೃಷ್ಣರು ಮುಗ್ಧರಾದರು ಹಾಗೂ ಅವರ ಮನಸ್ಸಿನಲ್ಲಿ ಈ ಚಿತ್ರ ಚಿರಕಾಲಕ್ಕೂ ನಿಂತುಹೋಯಿತು. ಮನೆಗೆ ಹಿಂದಿರುಗಿದ ಕಾಲೀಕೃಷ್ಣರು ತಮ್ಮ ಕೋಣೆಯ ಬಾಗಿಲುಹಾಕಿ ಸದಾ ಧ್ಯಾನ ಭಜನೆ ಪ್ರಾರ್ಥನೆ ಸ್ವಾಧ್ಯಾಯ ಗಳಲ್ಲಿ ಕಳೆದರು. ದಿನದಲ್ಲಿ ಸ್ವಲ್ಪಹೊತ್ತು ಧರ್ಮಪರಾಯಣ ರಾದ ತಮ್ಮ ಸ್ನೇಹಿತರೊಂದಿಗೆ ವಿಚಾರವಿನಿಮಯ ಮಾಡು ತ್ತಿದ್ದರು. ಕಾಲೀಕೃಷ್ಣರನ್ನು ನೋಡಿಕೊಂಡು ಹೋಗಲು ಆಗಾಗ್ಗೆ ಸ್ವಾಮಿ ಶಾರದಾನಂದರು, ನಿರಂಜನಾನಂದರು ಮುಂತಾದ ಸ್ವಾಮಿಗಳು ಅವರ ಮನೆಗೆ ಬರುತ್ತಿದ್ದರು.

ಈ ರೀತಿಯಲ್ಲಿ ಸುಮಾರು ೧೫ ತಿಂಗಳ ಬಳಿಕ, ತಮ್ಮ ಆರೋಗ್ಯ ಸುಧಾರಿಸಲು ಶ್ರೀಮಾತೆಯವರ ಆಶೀರ್ವಾದ ಪಡೆದು ಮತ್ತೆ ಮಠಕ್ಕೆ ಹಿಂತಿರುಗಿದರು. ಕೆಲವು ಕಾಲ ಬೃಂದಾವನದಲ್ಲಿ ನೆಲೆಸಿ ಕಠೋರ ಸಾಧನೆಯಲ್ಲಿ ಮಗ್ನರಾದರು. ಅಲ್ಲಿಯೂ ಅವರ ಆರೋಗ್ಯ ಕೆಡಲಾಗಿ ಸ್ವಾಮಿ ವಿಜ್ಞಾನಾ ನಂದರ ಔಷಧೋಪಚಾರದಿಂದ ಪುನಃ ಚೇತರಿಸಿಕೊಂಡರು.

೧೮೯೭ರಲ್ಲಿ, ಸ್ವಾಮಿ ವಿವೇಕಾನಂದರು ಅಮೆರಿಕದಿಂದ ಭಾರತಕ್ಕೆ ಮರಳುತ್ತಾರೆ ಎಂಬ ಸಂತೋಷದ ವಾರ್ತೆ ತಲುಪಿತು. ಸ್ವಾಮೀಜಿಯವರನ್ನು ದರ್ಶಿಸುವ ಆಸೆಯಿಂದ ಕಾಲೀಕೃಷ್ಣರು ಪುನಃ ಬಂಗಾಳದ ಕಡೆಗೆ ಹೊರಟರು. ಯಾರ ಬಗೆಗೆ ಇಷ್ಟು ದಿನ ಕೇವಲ ಧ್ಯಾನ ಮಾಡಿದ್ದರೊ ಅವರನ್ನು ಪ್ರತ್ಯಕ್ಷವಾಗಿ ನೋಡುವ ದಿನ ಹತ್ತಿರ ಬಂತು. ಮಠಕ್ಕೆ ಮರಳಿದ ಕಾಲೀಕೃಷ್ಣರು ಸ್ವಾಮಿ ವಿವೇಕಾನಂದರ ಪಾದಗಳಿಗೆ ಎರಗಿದರು. ಇದಕ್ಕೆ ಮುಂಚೆಯೇ ಕಾಲೀಕೃಷ್ಣರ ವಿಚಾರವನ್ನು ಅರಿತಿದ್ದ ಸ್ವಾಮಿಗಳು "ಓಹೊ, ಈ ಹುಡುಗನೇ, ಅರ್ಥ ವಾಯಿತು" ಎಂದರು. ಆ ದಿನವನ್ನು ನೆನೆಸಿಕೊಳ್ಳುತ್ತಾ ಕಾಲೀಕೃಷ್ಣರು ತಮ್ಮ ಮುಂದಿನ ದಿನಗಳಲ್ಲಿ ಹೇಳುತ್ತಿದ್ದರು: "ಆಹಾ! ಆ ಸಂಮೋಹಕ ಚಕ್ಷು! ಅವರ ಇಡೀ ಶರೀರದಿಂದ ಒಂದು ದಿವ್ಯಜ್ಯೋತಿ ಹೊರಹೊಮ್ಮುತ್ತಿತ್ತು. ಎಂತಹ ಅಪರೂಪದ ಮೂರ್ತಿ! ಒಂದೇ ಕಡೆಯಲ್ಲಿ ಸೌಂದರ್ಯ ಹಾಗೂ ಮಹಾಶಕ್ತಿಯ ಲೀಲೆ! ಅವರನ್ನು ಕಂಡಕೂಡಲೇ ನನ್ನಲ್ಲಿ ಉಂಟಾಗಿದ್ದು ಪ್ರೀತಿ, ಭಕ್ತಿ ಮತ್ತು ಒಂದಿನಿತು ಭಯವೂ ಕೂಡ." ಸ್ವಾಮಿ ವಿವೇಕಾನಂದರನ್ನು ಎಷ್ಟು ವರ್ಣಿಸಿದರೂ ಕಾಲೀಕೃಷ್ಣರಿಗೆ ತೃಪ್ತಿಯೇ ಇಲ್ಲ. ಮುಂದು ವರಿಯುತ್ತಾ ಅವರು ಹೇಳುತ್ತಿದ್ದರು: "ಸ್ವಾಮೀಜಿಯವರ ದೇಹದ ವರ್ಣ ಚಿನ್ನದಂತೆ ಉಜ್ವಲ! ಮುಖದಲ್ಲಿ ಒಂದು ಅಪೂರ್ವ ಭಾವ! ಅದು ತೇಜಸ್ಸಿನಿಂದ ಕೂಡಿ ಅಗ್ನಿವರ್ಣದಂತೆ ಕಾಣುತ್ತಿತ್ತು. ಅವರ ಕಣ್ಣಲ್ಲಿ ನಾವೇನಾದರೂ ಕಣ್ಣನ್ನು ನೆಟ್ಟು ನೋಡಿದರೆ ನಮ್ಮ ಕಣ್ಣು ಸುಟ್ಟುಹೋಗುವುದೇನೋ ಎನಿಸುತ್ತಿತ್ತು. ಒಳ ಅಂಗಳದಲ್ಲಿ ಕೌಪೀನಧಾರಿಗಳಾಗಿ ಏಕಾಕಿಯಾಗಿ ಸುತ್ತುತ್ತಿರುವಾಗ ಓರ್ವ ಸಿಂಹರಾಜನಂತೆ ಕಾಣುತ್ತಿದ್ದರು—ಆಧ್ಯಾತ್ಮಿಕ ಜಗತ್ತಿನ ನೆಪೋಲಿಯನ್ ಎಂಬಂತೆ! ಅವರ ಪದತಲದಲ್ಲಿ ಇಡೀ ಪ್ರಪಂಚ ಸಿಕ್ಕಿಬಿದ್ದಂತೆ ಇತ್ತು. ಅವರಿಂದ ಒಂದು ಮಹಾಶಕ್ತಿ ಅನವರತ ಸ್ಫುರಣ ಗೊಳ್ಳುತ್ತಿರುವುದನ್ನು, ಉಕ್ಕಿ ಹರಿಯುತ್ತಿರುವುದನ್ನು ನೋಡ ಬಹುದಿತ್ತು."

೧೮೯೭ರ ಪ್ರಥಮ ದಿನಗಳಲ್ಲಿ ಕಾಲೀಕೃಷ್ಣರಿಗೂ ಇನ್ನೋರ್ವ ಶಿಷ್ಯರಿಗೂ ಸ್ವಾಮಿ ವಿವೇಕಾನಂದರು ಸಂನ್ಯಾಸ ದೀಕ್ಷೆಯಿತ್ತರು. 'ವಿರಜಾಹೋಮ' ಮಾಡಿದ ಮೇಲೆ ಕಾಲೀ ಕೃಷ್ಣರನ್ನು ಸ್ವಾಮಿ ವಿರಜಾನಂದರೆಂಬ ನೂತನ ಹೆಸರಿನಿಂದ ಕರೆಯಲಾಯಿತು. ಅವರೆಲ್ಲರನ್ನೂ ಆಶೀರ್ವದಿಸುತ್ತಾ ಸ್ವಾಮಿ ವಿವೇಕಾನಂದರು ಹೇಳಿದರು: "ಈ ಸಾಧುಗಳೆಲ್ಲಾ ಬ್ರಹ್ಮ ಚರ್ಯವ್ರತಧಾರಿಗಳಾಗಿ ಜ್ವಲಂತ ಅಗ್ನಿಯಂತೆ ಪ್ರಕಾಶಮಾನ ರಾಗುತ್ತಾರೆ."

(ಮುಂದುವರಿಯುತ್ತದೆ)